All India Radio: Bangalore
National Bulletin In Kannada
17.03.2026  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ರಾಜ್ಯಸಭಾ ಚುನಾವಣೆ : ಹರಿಯಾಣದ ೨ ಸ್ಥಾನಗಳಿಗೆ ಬಿಜೆಪಿ ಹಾಗೂ ಕಾಂಗ್ರೆಸ್‌ನ ತಲಾ ಓರ್ವ ಅಭ್ಯರ್ಥಿ ಆಯ್ಕೆ ; ಬಿಹಾರದ ಸ್ಥಾನಗಳು ಎನ್‌ಡಿಎ ಪಾಲು
2. ಕಾಬೂಲ್ ಆಸ್ಪತ್ರೆಯ ಮೇಲೆ ಪಾಕಿಸ್ತಾನದಿಂದ ವೈಮಾನಿಕ ದಾಳಿ ; ೪೦೦ ಮಂದಿ ಸಾವು ; ೨೫೦ ಮಂದಿಗೆ ಗಾಯ
3. ಲೋಕಸಭೆಯಲ್ಲಿಂದು ೨೦೨೬-೨೭ನೇ ಸಾಲಿನ ರೈಲ್ವೆ ಸಚಿವಾಲಯದ ಅಡಿಯಲ್ಲಿನ ಅನುದಾನದ ಬೇಡಿಕೆಗಳ ಮೇಲಿನ ಚರ್ಚೆ ಮುಂದುವರೆಯುವ ನಿರೀಕ್ಷೆ
4. ಫ್ರಾನ್ಸ್‌ನಲ್ಲಿ ಪ್ರತಿಷ್ಠಿತ ಆರ್ಲಿಯೆನ್ಸ್ ಮಾಸ್ಟರ್ಸ್ ಸೂಪರ್-೩೦೦ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ ಆರಂಭ

<><><><>

ಬಿಜೆಪಿಯ ಸಂಜಯ್ ಭಾಟಿಯಾ ಮತ್ತು ಕಾಂಗ್ರೆಸ್ ಪಕ್ಷದ ಕರಮ್‌ವೀರ್ ಸಿಂಗ್ ಬೌಧ್ ಅವರು ಹರಿಯಾಣದಿಂದ ಎರಡು ರಾಜ್ಯಸಭಾ ಸ್ಥಾನಗಳಿಗೆ ಆಯ್ಕೆಯಾಗಿದ್ದಾರೆ ಎಂದು ಘೋಷಿಸಲಾಗಿದೆ. ಎರಡು ಸ್ಥಾನಗಳಿಗೆ ನಿನ್ನೆ ಮತದಾನ ನಡೆಯಿತು. ನಾಲ್ಕು ಕಾಂಗ್ರೆಸ್ ಮತ್ತು ಒಂದು ಬಿಜೆಪಿಯ ಮತಗಳು ಸೇರಿದಂತೆ ಒಟ್ಟು ಐದು ಮತಗಳು ಅಮಾನ್ಯವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಿಜೆಪಿಯ ಸಂಜಯ್ ಭಾಟಿಯಾ, ಕಾಂಗ್ರೆಸ್‌ನ ಕರಮ್‌ವೀರ್ ಸಿಂಗ್ ಬೌಧ್ ಮತ್ತು ಸ್ವತಂತ್ರ ಅಭ್ಯರ್ಥಿ ಸತೀಶ್ ನಂದಲ್ ಎರಡು ಸ್ಥಾನಗಳಿಗೆ ಕಣದಲ್ಲಿದ್ದರು. ಬಿಹಾರದ ಎಲ್ಲಾ ಐದು ರಾಜ್ಯಸಭಾ ಸ್ಥಾನಗಳಲ್ಲಿ ಎನ್‌ಡಿಎ ಗೆಲುವು ಸಾಧಿಸಿದೆ. ಬಿಜೆಪಿಯ ನಿತಿನ್ ನಬಿನ್ ಮತ್ತು ಶಿವೇಶ್ ರಾಮ್, ಜೆಡಿಯುನ ನಿತೀಶ್ ಕುಮಾರ್ ಮತ್ತು ರಾಮನಾಥ್ ಠಾಕೂರ್ ಹಾಗೂ ರಾಷ್ಟ್ರೀಯ ಲೋಕ ಮೋರ್ಚಾದ ಉಪೇಂದ್ರ ಕುಶ್ವಾಹ ವಿಜೇತರಾಗಿದ್ದಾರೆ.

<><><><>

ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿರುವ ಆಸ್ಪತ್ರೆಯೊಂದರ ಮೇಲೆ ನಿನ್ನೆ ರಾತ್ರಿ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ ೪೦೦ ಜನರು ಸಾವನ್ನಪ್ಪಿದ್ದು, ಸುಮಾರು ೨೫೦ ಮಂದಿ ಗಾಯಗೊಂಡಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ತಾಲಿಬಾನ್ ಸರ್ಕಾರದ ವಕ್ತಾರ ಜಬಿವುಲ್ಲಾ ಮುಜಾಹಿದ್, ದಾಳಿಯಿಂದಾಗಿ ಆಸ್ಪತ್ರೆಯ ಬಹುಪಾಲು ಭಾಗ ಧ್ವಂಸಗೊಂಡಿದ್ದು, ಸಾವುನೋವುಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ. ಪಾಕಿಸ್ತಾನದ ಸೇನಾ ಆಡಳಿತವು ಮತ್ತೊಮ್ಮೆ ಅಫ್ಘಾನಿಸ್ತಾನದ ವಾಯುಪ್ರದೇಶವನ್ನು ಉಲ್ಲಂಘಿಸಿ, ಚಿಕಿತ್ಸೆ ಪಡೆಯುತ್ತಿದ್ದ ವ್ಯಸನಿಗಳಿದ್ದ ಮಾದಕವಸ್ತು ಪುನರ್ವಸತಿ ಆಸ್ಪತ್ರೆಯನ್ನು ಗುರಿಯಾಗಿಸಿಕೊಂಡಿದೆ ಎಂದು ಅವರು ಆರೋಪಿಸಿದ್ದಾರೆ. ಉಭಯ ದೇಶಗಳ ಗಡಿಭಾಗದಲ್ಲಿ ಗುಂಡಿನ ಚಕಮಕಿ ನಡೆದ ಬೆನ್ನಲ್ಲೇ ಈ ದಾಳಿ ಸಂಭವಿಸಿದೆ.

<><><>

ಲೋಕಸಭೆಯು ಇಂದು ೨೦೨೬-೨೭ನೇ ಸಾಲಿನ ರೈಲ್ವೆ ಸಚಿವಾಲಯದ ನಿಯಂತ್ರಣದ ಅಡಿಯಲ್ಲಿನ ಅನುದಾನದ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದುವರೆಸಿ, ಮತದಾನವನ್ನು ಕೈಗೆತ್ತಿಕೊಳ್ಳಲಿದೆ. ನಿನ್ನೆ ಚರ್ಚೆಯನ್ನು ಪ್ರಾರಂಭಿಸಿದ ಕಾಂಗ್ರೆಸ್‌ನ ತಾರಿಕ್ ಅನ್ವರ್, ಕೇಂದ್ರ ಸರ್ಕಾರವು ತನ್ನ ಗುರಿಗಳನ್ನು ತಲುಪುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿ ಗುರುತಿಸಲಾದ ೧ ಸಾವಿರದ ೩೩೭ ನಿಲ್ದಾಣಗಳ ಪೈಕಿ ಕೇವಲ ೧೬೦ ನಿಲ್ದಾಣಗಳಲ್ಲಿ ಮಾತ್ರ ಮರು ಅಭಿವೃದ್ಧಿ ಕೆಲಸ ಪೂರ್ಣಗೊಂಡಿದೆ ಎಂದು ಅವರು ಟೀಕಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿಯ ಗಣೇಶ್ ಸಿಂಗ್, ಕಳೆದ ಹತ್ತು ವರ್ಷಗಳಲ್ಲಿ ರೈಲ್ವೆಯಲ್ಲಿ ಮಹತ್ವದ ಬದಲಾವಣೆಯಾಗಿದೆ ಎಂದು ಸಮರ್ಥಿಸಿಕೊಂಡರು. ೨೦೧೩-೧೪ರಲ್ಲಿ ೬೩ ಸಾವಿರ ಕೋಟಿ ರೂಪಾಯಿಗಳಿದ್ದ ರೈಲ್ವೆ ಬಜೆಟ್ ಈಗ ೨ ಲಕ್ಷದ ೭೮ ಸಾವಿರ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ ಎಂದು ಅವರು ಮಾಹಿತಿ ನೀಡಿದರು. ಈ ನಡುವೆ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಯಲ್ಲಿ ಇಂದು 'ವಿನಿಯೋಗ ವಿಧೇಯಕ ೨೦೨೬' ಅನ್ನು ಮಂಡಿಸುವ ಸಾಧ್ಯತೆಯಿದೆ.

<><><>

ಅಸ್ಸಾಂ, ಕೇರಳ ಮತ್ತು ಪುದುಚೇರಿ ವಿಧಾನಸಭೆ ಚುನಾವಣೆಗಳಿಗೆ ಅಧಿಕೃತ ಅಧಿಸೂಚನೆ ಹೊರಬಿದ್ದ ಬೆನ್ನಲ್ಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ತಮಿಳುನಾಡು ಮತ್ತು ಪಶ್ಚಿಮ

ಬಂಗಾಳದ ಜೊತೆಗೆ ಈ ರಾಜ್ಯಗಳ ಚುನಾವಣಾ ವೇಳಾಪಟ್ಟಿಯನ್ನು ಕಳೆದ ಭಾನುವಾರ ಪ್ರಕಟಿಸಲಾಗಿತ್ತು. ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏಪ್ರಿಲ್ ೯ ರಂದು ಮತದಾನ ನಡೆಯಲಿದೆ. ಎಲ್ಲಾ ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ ಮತ ಎಣಿಕೆಯು ಮೇ ೪ ರಂದು ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

<><><>

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ವೇಳೆ ನಿಗಾವಹಿಸಲು ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆಗೆ ವಿಶೇಷ ಒತ್ತು ನೀಡಲಾಗುತ್ತಿದೆ. ರಾಜ್ಯದ ಶೇಕಡಾ ೧೦೦ ರಷ್ಟು ಮತದಾನ ಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್ ಕಡ್ಡಾಯಗೊಳಿಸಲಾಗಿದ್ದು, ವೆಬ್‌ಕಾಸ್ಟಿಂಗ್ ನಡೆಸದ ಕೇಂದ್ರಗಳಲ್ಲಿ ಮರು ಮತದಾನದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ. ಇದೇ ಮೊದಲ ಬಾರಿಗೆ ಸೂಕ್ಷ್ಮ ಪ್ರದೇಶಗಳು ಮತ್ತು ದೊಡ್ಡ ಸಭೆಗಳ ಮೇಲೆ ನಿಗಾ ಇಡಲು ಡ್ರೋನ್‌ಗಳನ್ನು ಬಳಸಲಾಗುತ್ತಿದೆ. ಈಗಾಗಲೇ ೫೫ ವಿಧಾನಸಭಾ ಕ್ಷೇತ್ರಗಳನ್ನು ಅತಿ ಸೂಕ್ಷ್ಮ ಎಂದು ಗುರುತಿಸಲಾಗಿದ್ದು, ಸಮಗ್ರ ಮೇಲ್ವಿಚಾರಣೆಗಾಗಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ರಾಜ್ಯ ಮಟ್ಟದ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದೆ.

<><><>

ಇರಾನ್‌ನಲ್ಲಿರುವ ಭಾರತೀಯ ನಾಗರಿಕರಿಗೆ ಅಲ್ಲಿನ ಭಾರತೀಯ ರಾಯಭಾರ ಕಚೇರಿ ಅತ್ಯಂತ ತುರ್ತು ಮತ್ತು ಕಟ್ಟುನಿಟ್ಟಿನ ಸಲಹೆ ನೀಡಿದೆ. ಇರಾನ್ ನೆಲೆಸಿರುವ ಭಾರತೀಯರು ಮುನ್ನೆಚ್ಚರಿಕೆ ಇಲ್ಲದೇ ಅಥವಾ ರಾಯಭಾರ ಕಚೇರಿಯ ಪೂರ್ವಾನುಮತಿ ಮತ್ತು ಸಮನ್ವಯವಿಲ್ಲದೇ ಯಾವುದೇ ಭೂಗಡಿಗಳನ್ನು ದಾಟಲು ಪ್ರಯತ್ನಿಸಬಾರದು ಎಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಅಧಿಕೃತ ಮಾರ್ಗದರ್ಶನವಿಲ್ಲದೇ ಗಡಿ ದಾಟಲು ಮುಂದಾದಲ್ಲಿ ಅಂತಹ ವ್ಯಕ್ತಿಗಳು ಗಂಭೀರ ಸ್ವರೂಪದ ವಲಸೆ ನಿಯಮಗಳ ಉಲ್ಲಂಘನೆ ಮತ್ತು ಕಾನೂನಾತ್ಮಕ ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಲಾಗಿದೆ.

<><><>

ಕತಾರ್‌ನ ದೋಹಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಮಾಹಿತಿಯಂತೆ, ಸುಮಾರು ೧ ಸಾವಿರದ ೧೦೦ ಭಾರತೀಯ ಪ್ರಯಾಣಿಕರು ನಿನ್ನೆ ಕತಾರ್ ಏರ್ವೇಸ್ ವಿಮಾನಗಳ ಮೂಲಕ ನವದೆಹಲಿ, ಮುಂಬೈ ಮತ್ತು ಕೊಚ್ಚಿಗೆ ಪ್ರಯಾಣಿಸಿದ್ದಾರೆ. ಮಾರ್ಚ್ ೧೮ ರಿಂದ ಅಹಮದಾಬಾದ್,

ಅಮೃತ್‌ಸರ್, ಬೆಂಗಳೂರು, ಚೆನ್ನೈ, ದೆಹಲಿ, ಹೈದರಾಬಾದ್, ಕೊಚ್ಚಿ, ಕೋಯಿಕ್ಕೋಡ್ ಮತ್ತು ಮುಂಬೈ ನಗರಗಳಿಗೆ ಕತಾರ್ ಏರ್ವೇಸ್ ವಿಮಾನಗಳು ಸಂಚರಿಸಲಿವೆ ಎಂದು ರಾಯಭಾರ ಕಚೇರಿ ತಿಳಿಸಿದೆ. ಪ್ರಯಾಣಿಕರು ಹೆಚ್ಚಿನ ಮಾಹಿತಿಯನ್ನು ವಿಮಾನಯಾನ ಸಂಸ್ಥೆಯ ಜಾಲತಾಣ ಅಥವಾ ಆಪ್‌ನಲ್ಲಿ ಪಡೆಯಲು ಸೂಚಿಸಲಾಗಿದೆ.

<><><>

ರಾಷ್ಟ್ರಪತಿ ಭವನದಲ್ಲಿರುವ ಅಮೃತ್ ಉದ್ಯಾನವನ್ನು ಇಂದು ಹಿರಿಯ ನಾಗರಿಕರಿಗಾಗಿ ಪ್ರತ್ಯೇಕವಾಗಿ ಮುಕ್ತವಾಗಿಡಲಾಗುವುದು. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ವಿವಿಧ ರಾಜ್ಯಗಳು, ದೆಹಲಿ ಪೊಲೀಸರ ಹಿರಿಯ ನಾಗರಿಕರ ಘಟಕ ಮತ್ತು ಬ್ರಹ್ಮಕುಮಾರಿಗಳ ಸಹಯೋಗದೊಂದಿಗೆ ಈ ಭೇಟಿಯನ್ನು ಆಯೋಜಿಸಿದೆ. ಹಿರಿಯ ನಾಗರಿಕರಿಗೆ ಉದ್ಯಾನದ ಸೌಂದರ್ಯವನ್ನು ಆಸ್ವಾದಿಸಲು ಅವಕಾಶ ಕಲ್ಪಿಸುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

<><><>

ಅಮೆರಿಕದ ವಿವಿಧ ಸರ್ಕಾರಿ ಕಾರ್ಯಕ್ರಮಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ವಂಚನೆಗಳನ್ನು ತಡೆಗಟ್ಟಲು ಅಧ್ಯಕ್ಷ ಡೋನಾಲ್ಡ್ ಟ್ರಂಪ್ ನೂತನ ಫೆಡರಲ್ ಕಾರ್ಯಪಡೆ ಘೋಷಿಸಿದ್ದಾರೆ. ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಈ ಕಾರ್ಯಪಡೆಯ ನೇತೃತ್ವ ವಹಿಸಲಿದ್ದಾರೆ. ಶ್ವೇತಭವನ ಸಿಬ್ಬಂದಿ ಕಾರ್ಯದರ್ಶಿ ವಿಲ್ ಶಾರ್ಫ್ ಮಾತನಾಡಿ, ವಂಚನೆಯನ್ನು ತಡೆಗಟ್ಟಿ ಉದ್ದೇಶಿತ ಕೋಟ್ಯಾಂತರ ಡಾಲರ್‌ಗಳನ್ನು ಅಮೆರಿಕದ ತೆರಿಗೆದಾರನಿಗೆ ಮರಳಿಸುವುದು ಇದರ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

<><><>

ಸರ್ಕಾರದ ಪರವಾಗಿ ಗೋಧಿ ಮತ್ತು ಭತ್ತದ ಖರೀದಿಯಲ್ಲಿ ತೊಡಗಿರುವ ಆರ್ಥಿಕ ಮತ್ತು ಸಹಕಾರ ಸಂಘಗಳಿಗೆ ಪಾವತಿಸಬೇಕಾದ ಕಮಿಷನ್ ದರಗಳ ಪರಿಷ್ಕರಣೆಗೆ ಸರ್ಕಾರ ಅನುಮೋದನೆ ನೀಡಿದೆ. ಈ ಪರಿಷ್ಕೃತ ಕಮಿಷನ್ ದರಗಳು ೨೦೨೬-೨೭ರ ಹಿಂಗಾರು ಮಾರುಕಟ್ಟೆ ಹಂಗಾಮಿನಿಂದ ಜಾರಿಗೆ ಬರಲಿವೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

<><><>

ದೆಹಲಿಯಲ್ಲಿರುವ ಪಟಿಯಾಲ ಹೌಸ್‌ನಲ್ಲಿರುವ ವಿಶೇಷ ಎನ್‌ಐಎ ನ್ಯಾಯಾಲಯ ಏಳು ವಿದೇಶಿ ಪ್ರಜೆಗಳನ್ನು ೧೧ ದಿನಗಳ ಕಾಲ ರಾಷ್ಟ್ರೀಯ ತನಿಖಾ ಸಂಸ್ಥೆಯ ವಶಕ್ಕೆ ಒಪ್ಪಿಸಿದೆ. ಬಂಧಿತರಲ್ಲಿ ದೆಹಲಿಯಲಿ ಸಿಕ್ಕಿಬಿದ್ದ ಮೂವರು ಉಕ್ರೆನ್ ಪ್ರಜೆಗಳು ಲಖನೌದ ಮೂವರು ಮತ್ತು ಕೊಲ್ಕತ್ತಾದಲ್ಲಿ ಬಂಧಿತರಾದ ಒಬ್ಬ ಅಮೆರಿಕ ಪ್ರಜೆ ಸೇರಿದ್ದಾರೆ. ಹೆಚ್ಚುವರಿ ಸತ್ರ ನ್ಯಾಯಾಧೀಶ ಪ್ರಶಾಂತ್ ಶರ್ಮ ಈ ಪ್ರಕರಣದ ವಿಚಾರಣೆಯನ್ನು ನಡೆಸಿದರು. ಬಂಧಿತ ವಿದೇಶಿಯರು ಭಾರತಕ್ಕೆ ವಿಸಾ ಮೂಲಕ ಆಗಮಿಸಿ ನಂತರ ಸಂರಕ್ಷಿತ ಪ್ರದೇಶವಾದ ಮಿಜೋರಾಂ ಪ್ರವೇಶಿಸಿದ್ದರು ಎಂದು ಎನ್‌ಐಎ ಆರೋಪಿಸಿದೆ. ಬಳಿಕ ಅಲ್ಲಿಂದ ಮ್ಯಾನ್ಮಾರ್‌ಗೆ ತೆರಳಿದ್ದರು. ಮ್ಯಾನ್ಮಾರ್‌ನಲ್ಲಿ ಬಂಧಿತರು ಜನಾಂಗೀಯ ಗುಂಪುಗಳನ್ನು ಸಂಪರ್ಕಿಸಿದ್ದರು ಎನ್ನಲಾಗಿದೆ. ಪ್ರಕರಣದ ತನಿಖೆಗಾಗಿ ಎನ್‌ಐಎ ೧೫ ದಿನಗಳ ಕಸ್ಟಡಿಯನ್ನು ಕೋರಿತ್ತಾದರೂ ನ್ಯಾಯಾಲಯ ೧೧ ದಿನಗಳ ಕಾಲ ವಿಚಾರಣೆಗೆ ಅವಕಾಶ ನೀಡಿದೆ.

<><><><>

ಫ್ರಾನ್ಸ್‌ನಲ್ಲಿ ಇಂದಿನಿಂದ ಆರಂಭವಾಗಲಿರುವ ಪ್ರತಿಷ್ಠಿತ ಆರ್ಲಿಯೆನ್ಸ್ ಮಾಸ್ಟರ್ಸ್ ಸೂಪರ್ ೩೦೦ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಕಿಡಂಬಿ ಶ್ರೀಕಾಂತ್, ಉದಯೋನ್ಮುಖ ತಾರೆಯರಾದ ಆಯಷ್‌ಶೆಟ್ಟಿ ಮತ್ತು ತನ್ವಿ ಶರ್ಮ ಮುನ್ನಡೆಸಲಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಿಡಂಬಿ ಶ್ರೀಕಾಂತ್, ಆಯುಷ್‌ಶೆಟ್ಟಿಯ ಜೊತೆಗೆ ತರುಣ್ ಮನ್ನೆಪಲ್ಲಿ ಮತ್ತು ಕಿರಣ್ ಜಾರ್ಜ್ ಕೂಡ ಭಾರತದ ಪರವಾಗಿ ಕಣಕ್ಕಿಳಿಯುತ್ತಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ ತನ್ವಿ ಶರ್ಮ ಸ್ಪರ್ಧಿಸುತ್ತಿದ್ದಾರೆ. ಹೆಚ್.ಎಸ್.ಪ್ರಣಯ್, ಲಕ್ಷ್ಯಸೇನ್ ಮತ್ತು ಪಿ.ವಿ.ಸಿಂಧು, ಈ ಪಂದ್ಯಾವಳಿಯಲ್ಲಿ ಸ್ಪರ್ಧಿಸುತ್ತಿಲ್ಲ. ಮಿಶ್ರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ ಮತ್ತು ಧ್ರುವ್ ಕಪಿಲಾ ಜೋಡಿ ಹಾಗೂ ರೋಹನ್ ಕಪೂರ್ ಮತ್ತು ಋತ್ವಿಕಾಗಡ್ಡೆ ಜೋಡಿ ಭಾರತದ ಪರವಾಗಿ ಕಣಕ್ಕಿಳಿಯುತ್ತಿದೆ. ಪುರುಷರ ಡಬಲ್ಸ್‌ನಲ್ಲಿ ಹರಿಹರನ್ ಅಂಸಕರುಣನ್ ಮತ್ತು ಎಂ.ಆರ್.ಅರ್ಜುನ್ ಕಣಕ್ಕಿಳಿಯುತ್ತಿದ್ದರೆ, ಏಷ್ಯಾನ್ ಗೇಮ್ಸ್ ಚಾಂಪಿಯನ್ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಜೋಡಿ ಪಂದ್ಯಾವಳಿಯಲ್ಲಿ ಸ್ಪರ್ಧಿಸುತ್ತಿಲ್ಲ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>